

# ಸಂದೇಶ

**ಆನಂದ್ ಸಿಂಗ್**

ಸನ್ಮಾನ್ಯ ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು, ಕರ್ನಾಟಕ ಸರ್ಕಾರ

ಕರ್ನಾಟಕ ಪ್ರವಾಸೋದ್ಯಮ ನೀತಿ 2020-25 ಅನ್ನು ಸೆಪ್ಟೆಂಬರ್-2020 ರಂದು ಬಿಡುಗಡೆಗೊಳಿಸಲಾಗಿದ್ದು, ಕೋವಿಡ್-19ರ ಹಿನ್ನಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸುವ ಉದ್ದೇಶದಿಂದ ಕೆಲವು ಅತ್ಯಗತ್ಯ ಮಾರ್ಪಾಡುಗಳೊಂದಿಗೆ ಪರಿಷ್ಕೃತ ಕರ್ನಾಟಕ ಪ್ರವಾಸೋದ್ಯಮ ನೀತಿ 2020-26 ಅನ್ನು ಲೋಕಾರ್ಪಣೆಗೊಳಿಸಲು ನಾನು ಹರ್ಷಿಸುತ್ತೇನೆ. ಈ ನೀತಿಯು 2026 ರವರೆಗಿನ ಅವಧಿಯ ಕರ್ನಾಟಕ ಪ್ರವಾಸೋದ್ಯಮ ಕ್ಷೇತ್ರದ ವಿವಿಧ ಚಟುವಟಿಕೆ ಹಾಗೂ ಅಭಿವೃದ್ಧಿಗೆ ದಿಕ್ಸೂಚಿಯಾಗಿದೆ.

ಪ್ರವಾಸೋದ್ಯಮವು ಉದ್ಯೋಗಾವಕಾಶಗಳನ್ನು ಸೃಜಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಿದ್ದು, ಅನೇಕ ಜನರ ಜೀವನಾಧಾರವಾಗಿದೆ. ಕರ್ನಾಟಕ ಸರ್ಕಾರವು ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಹಲವಾರು ಪೂರಕ ಕ್ರಮಗಳನ್ನು ಕೈಗೊಳ್ಳುತ್ತಿದೆ.

"ದೇಶ ಸುತ್ತಿ ನೋಡು-ಕೋಶ ಓದಿ ನೋಡು" ಎಂಬ ನಾಣ್ಣುಡಿಯಂತೆ, ಇತ್ತೀಚಿನ ದಿನಗಳಲ್ಲಿ ದೇಶವಿದೇಶಗಳ ಸಾರ್ವಜನಿಕರು ಪ್ರವಾಸವನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಳ್ಳುತ್ತಿದ್ದು, ಇದರಿಂದಾಗಿ ಪ್ರವಾಸಿ ತಾಣಗಳಲ್ಲಿ ಅಗತ್ಯವಾಗಿರುವ ಉತ್ತಮ ಸೇವೆ ಮತ್ತು ಸೌಲಭ್ಯಗಳನ್ನು ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ, ಎಲ್ಲಾ ಚಟುವಟಿಕೆಗಳನ್ನು ಸರ್ಕಾರವೇ ನಿರ್ಮಿಸಿ, ನಿರ್ವಹಣೆ ಮಾಡುವುದು ಕಷ್ಟಸಾಧ್ಯವಾಗಿರುತ್ತದೆ. ಆದುದರಿಂದ, ಪ್ರವಾಸೋದ್ಯಮ ಕ್ಷೇತ್ರದಲ್ಲಿ ಖಾಸಗಿ ಹೂಡಿಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಸೆಳೆಯಲು ಇಲಾಖೆಯಿಂದ ಸಹಾಯಧನ, ರಿಯಾಯಿತಿ ಹಾಗೂ ಹಲವು ಪ್ರೋತ್ಸಾಹಕಗಳನ್ನು ಒದಗಿಸಲು ಈ ನೀತಿಯಲ್ಲಿ ಅವಕಾಶ ಕಲ್ಪಿಸಲಾಗಿದೆ.

ಈ ನೀತಿಯಲ್ಲಿ 26 ಪ್ರವಾಸಿ ಉತ್ಪನ್ನಗಳನ್ನು ಗುರುತಿಸಲಾಗಿದ್ದು, ಈ ಉತ್ಪನ್ನಗಳಿಗೆ ಅನೇಕ ಉತ್ತೇಜನಗಳನ್ನು ಅಳವಡಿಸಿಕೊಳ್ಳಲಾಗಿದೆ. ಕೋವಿಡ್-19ರ ಹಿನ್ನೆಲೆಯಲ್ಲಿ ಅತೀ ಸಂಕಷ್ಟಕ್ಕೀಡಾಗಿರುವ ಕ್ಷೇತ್ರಗಳಲ್ಲಿ ಒಂದಾಗಿರುವ ಪ್ರವಾಸೋದ್ಯಮವನ್ನು ಪುನಶ್ಚೇತನಗೊಳಿಸಲು ಹೆಚ್ಚಿನ ಪ್ರೋತ್ಸಾಹಕ, ರಿಯಾಯಿತಿ ಹಾಗೂ ಉತ್ತೇಜನ ನೀಡುವ ಮೂಲಕ ಕರ್ನಾಟಕವನ್ನು ಜಾಗತಿಕವಾಗಿ ಮುಂಚೂಣಿಯ ಪ್ರವಾಸೋದ್ಯಮ ತಾಣವನ್ನಾಗಿಸುವಲ್ಲಿ ಈ ನೀತಿಯು ಪ್ರಮುಖ ಪಾತ್ರ ವಹಿಸುತ್ತದೆ ಎಂಬ ಭರವಸೆ ನನಗಿದೆ.

ಈ ನೀತಿಯನ್ನು ಸಿದ್ಧಪಡಿಸುವಲ್ಲಿ ತಮ್ಮನ್ನು ತೊಡಗಿಸಿಕೊಂಡು ಬೆಂಬಲ, ಸಹಕಾರ ಮತ್ತು ಬದ್ಧತೆ ತೋರಿದ ಪ್ರವಾಸೋದ್ಯಮ ಇಲಾಖೆ, ಸರ್ಕಾರಿ ಸಂಸ್ಥೆಗಳು, ಪ್ರವಾಸೋದ್ಯಮ ಪಾಲುದಾರರು ಮತ್ತು ತಜ್ಞರಿಗೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ.

**(ಆನಂದ್ ಸಿಂಗ್)**
ಸನ್ಮಾನ್ಯ ಪ್ರವಾಸೋದ್ಯಮ,
ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

# ಪರಿವಿಡಿ


1. ಪರಿಚಯ ... 19
2. ಕರ್ನಾಟಕ ಪ್ರವಾಸೋದ್ಯಮ ನೀತಿ, 2020–26 ಮುನ್ನೋಟ, ಗುರಿ ಮತ್ತು ಧ್ಯೇಯೋದ್ದೇಶಗಳು ... 11
3. ಕಾರ್ಯತಂತ್ರ ... 14
4. ಪ್ರವಾಸೋದ್ಯಮ ಮಾರುಕಟ್ಟೆ ಮತ್ತು ಉತ್ತೇಜನ ... 17
5. ಪ್ರವಾಸೋದ್ಯಮ ಮೂಲಸೌಕರ್ಯ ... 21
6. ಪ್ರವಾಸೋದ್ಯಮ ಉತ್ಪನ್ನಗಳು ... 26
7. ಕೌಶಲ್ಯಾಭಿವೃದ್ಧಿ ... 39
8. ಪ್ರವಾಸಿಗರ ಆರಾಮದಾಯಕತೆ ಮತ್ತು ಸುರಕ್ಷತೆ ... 41
9. ಸಮುದಾಯದ ಸಹಭಾಗಿತ್ವ ... 45
10. ಸುಸ್ಥಿರ ಪ್ರವಾಸೋದ್ಯಮ ... 46
11. ಪ್ರವಾಸೋದ್ಯಮ ದತ್ತಾಂಶ ವಿಶ್ಲೇಷಣೆ ಮತ್ತು ಡಿಜಿಟಲ್ ಉಪಕ್ರಮಗಳು ... 48
12. ಹೂಡಿಕೆ ಸೌಲಭ್ಯಗಳು ... 50
13. ಪರಿಭಾಷೆಗಳು ... 51
14. ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು ... 57
15. ಸಾಂಸ್ಥಿಕ ಕಾರ್ಯಚೌಕಟ್ಟು ... 66
16. ಅನುಬಂಧಗಳು ... 71

| ಕ್ರಮ ಸಂಖ್ಯೆ | ಜಿಲ್ಲೆ | ಆದ್ಯತಾ ಪ್ರವಾಸಿ ತಾಣಗಳು[1] |
|---|---|---|
| 1. | ಬಾಗಲಕೋಟೆ | ಐಹೊಳೆ, ಬಾದಾಮಿ, ಪಟ್ಟದಕಲ್ಲು, ಕೂಡಲ ಸಂಗಮ |
| 2. | ಬಳ್ಳಾರಿ | ಇಡೀ ಜಿಲ್ಲೆ |
| 3. | ಬೆಳಗಾವಿ | ಇಡೀ ಜಿಲ್ಲೆ |
| 4. | ಬೆಂಗಳೂರು ಗ್ರಾಮಾಂತರ | ದಾಬಸ್ ಪೇಟೆ, ದೊಡ್ಡಬಳ್ಳಾಪುರ |
| 5. | ಬೆಂಗಳೂರು ನಗರ | ಅನ್ವಯಿಸುವುದಿಲ್ಲ |
| 6. | ಬೀದರ್ | ಬೀದರ್, ಬಸವಕಲ್ಯಾಣ |
| 7. | ಚಾಮರಾಜನಗರ | ಇಡೀ ಜಿಲ್ಲೆ |
| 8. | ಚಿಕ್ಕಬಳ್ಳಾಪುರ | ಚಿಕ್ಕಬಳ್ಳಾಪುರ, ಗೌರಿಬಿದನೂರು, ಮುದ್ದೇನಹಳ್ಳಿ, ನಂದಿ ಬೆಟ್ಟಗಳು |
| 9. | ಚಿಕ್ಕಮಗಳೂರು | ಇಡೀ ಜಿಲ್ಲೆ |
| 10. | ಚಿತ್ರದುರ್ಗ | ಚಿತ್ರದುರ್ಗ, ಹಿರಿಯೂರು |
| 11. | ದಕ್ಷಿಣ ಕನ್ನಡ | ಇಡೀ ಜಿಲ್ಲೆ |
| 12. | ದಾವಣಗೆರೆ | ಇಡೀ ಜಿಲ್ಲೆ |
| 13. | ಧಾರವಾಡ | ಇಡೀ ಜಿಲ್ಲೆ |
| 14. | ಗದಗ | ಡಂಬಳ, ಗದಗ, ಲಕ್ಕುಂಡಿ |
| 15. | ಹಾಸನ | ಇಡೀ ಜಿಲ್ಲೆ |
| 16. | ಹಾವೇರಿ | ಇಡೀ ಜಿಲ್ಲೆ |
| 17. | ಕಲಬುರಗಿ | ಇಡೀ ಜಿಲ್ಲೆ |
| 18. | ಕೊಡಗು | ಇಡೀ ಜಿಲ್ಲೆ |
| 19. | ಕೋಲಾರ | ಅವನಿ, ಕೋಲಾರ, ಕೋಲಾರ ಗೋಲ್ಡ್ ಫೀಲ್ಡ್ |
| 20. | ಕೊಪ್ಪಳ | ಆನೆಗುಂದಿ, ಇಟಗಿ, ಕೊಪ್ಪಳ, ಮುನೀರಬಾದ್ |
| 21. | ಮಂಡ್ಯ | ಆದಿಚುಂಚುನಗರಿ, ಕೊಕ್ಕರೆಬೆಳ್ಳೂರು, ಮೇಲುಕೋಟೆ, ಶ್ರೀರಂಗಪಟ್ಟಣ, ಶಿವನಸಮುದ್ರ |
| 22. | ಮೈಸೂರು | ಬೈಲಕುಪ್ಪೆ, ಮೈಸೂರು, ನಂಜನಗೂಡು, ಸೋಮನಾಥಪುರ |
| 23. | ರಾಯಚೂರು | ಹಟ್ಟಿ, ಮಸ್ಕಿ, ರಾಯಚೂರು |
| 24. | ರಾಮನಗರ | ಇಡೀ ಜಿಲ್ಲೆ |
| 25. | ಶಿವಮೊಗ್ಗ | ಇಡೀ ಜಿಲ್ಲೆ |
| 26. | ತುಮಕೂರು | ಇಡೀ ಜಿಲ್ಲೆ |
| 27. | ಉಡುಪಿ | ಇಡೀ ಜಿಲ್ಲೆ |
| 28. | ಉತ್ತರ ಕನ್ನಡ | ಇಡೀ ಜಿಲ್ಲೆ |
| 29. | ವಿಜಯನಗರ | ಇಡೀ ಜಿಲ್ಲೆ |
| 30. | ವಿಜಯಪುರ | ಇಡೀ ಜಿಲ್ಲೆ |
| 31. | ಯಾದಗಿರಿ | ಶೋರಾಪುರ, ಯಾದಗಿರಿ |

[1] ಜಿಲ್ಲೆಯ ಹೆಸರು ಮತ್ತು ಆದ್ಯತಾ ಪ್ರವಾಸಿ ತಾಣಗಳು ಒಂದೇ ಇದ್ದಾಗ, ಆದ್ಯತಾ ಪ್ರವಾಸಿ ತಾಣಗಳು (ಎಫ್‌ಟಿಡಿ)ಯು ಜಿಲ್ಲೆಯಲ್ಲಿ ಅದೇ ಹೆಸರಿನ ನಗರ/ ಪಟ್ಟಣವನ್ನು ಉಲ್ಲೇಖಿಸುತ್ತದೆ.

| ಕ್ರಮ ಸಂಖ್ಯೆ | ಪ್ರವಾಸೋದ್ಯಮ ಯೋಜನೆ | ಯೋಜನೆಗಾಗಿ ಕನಿಷ್ಠ ಇಪಿಸಿ ಹೂಡಿಕೆ (ರೂ.ಗಳಲ್ಲಿ) | ಇಪಿಸಿ ಯ ಶೇಕಡಾವಾರು ಸಹಾಯಧನ (%) | ಬಂಡವಾಳ ಹೂಡಿಕೆ ಸಹಾಯಧನದ ಗರಿಷ್ಠ ಮಿತಿ | ಸಹಾಯ ಧನ ನೀಡಬೇಕಾದ ಸ್ಥಳಗಳು |
|---|---|---|---|---|---|
| 1 | ಸಾಹಸ ಪ್ರವಾಸೋದ್ಯಮ ಯೋಜನೆ | 25 ಲಕ್ಷ ರೂಪಾಯಿಗಳು | ಶೇಕಡಾ 25ರಷ್ಟು | 2 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸಿ ತಾಣಗಳು |
| 2 | ಕ್ಯಾರವಾನ್ ಪಾರ್ಕ್ ಯೋಜನೆ | 25 ಲಕ್ಷ ರೂಪಾಯಿಗಳು | ಶೇಕಡಾ 25ರಷ್ಟು | 2 ಕೋಟಿ ರೂಪಾಯಿಗಳು | ಕರ್ನಾಟಕದ ಎಲ್ಲಾ ಪ್ರವಾಸಿ ತಾಣಗಳು |
| 3 | ಕ್ಯಾರವಾನ್ ಪ್ರವಾಸೋದ್ಯಮ ಯೋಜನೆ | 25 ಲಕ್ಷ ರೂಪಾಯಿಗಳು | ಶೇಕಡಾ 25 ರಷ್ಟು | 1 ಕೋಟಿ ರೂಪಾಯಿಗಳು | ಕರ್ನಾಟಕದ ಎಲ್ಲಾ ಪ್ರವಾಸಿ ತಾಣಗಳು |
| 4 | ಹೋಟೆಲ್ ಯೋಜನೆ–ಬಜೆಟ್ | 5 ಕೋಟಿ ರೂಪಾಯಿಗಳು | ಶೇಕಡಾ 15ರಷ್ಟು | 2 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸೋದ್ಯಮ ತಾಣಗಳು (ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು ಮತ್ತು ಮೈಸೂರು ನಗರ ಪಾಲಿಕೆಗಳನ್ನು ಹೊರತುಪಡಿಸಿ) |
| 5 | ಹೋಟೆಲ್ ಯೋಜನೆ – ಪ್ರೀಮಿಯಂ | 10 ಕೋಟಿ ರೂಪಾಯಿಗಳು | ಶೇಕಡಾ 15ರಷ್ಟು | 5 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸೋದ್ಯಮ ತಾಣಗಳು (ಬೆಂಗಳೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು ಮತ್ತು ಮೈಸೂರು ನಗರ ಪಾಲಿಕೆಗಳನ್ನು ಹೊರತುಪಡಿಸಿ) |
| 6 | ಹೌಸ್‌ಬೋಟ್ ಯೋಜನೆ | 1 ಕೋಟಿ ರೂಪಾಯಿಗಳು | ಶೇಕಡಾ 25 ರಷ್ಟು | 2 ಕೋಟಿ ರೂಪಾಯಿಗಳು | ಕರ್ನಾಟಕದ ಎಲ್ಲಾ ಪ್ರವಾಸಿ ತಾಣಗಳು |
| 7 | ರಸ್ತೆ ಬದಿ ಸೌಲಭ್ಯಗಳು [2] | 2 ಕೋಟಿ ರೂಪಾಯಿಗಳು | ಶೇಕಡಾ 25 ರಷ್ಟು | 2 ಕೋಟಿ ರೂಪಾಯಿಗಳು | ಕರ್ನಾಟಕದ ಎಲ್ಲಾ ಪ್ರವಾಸಿ ತಾಣಗಳು |
| 8 | ಸ್ವಾಸ್ಥ್ಯ ಕೇಂದ್ರ | 2 ಕೋಟಿ ರೂಪಾಯಿಗಳು | ಶೇಕಡಾ 25 ರಷ್ಟು | 2 ಕೋಟಿ ರೂಪಾಯಿಗಳು | ಆದ್ಯತಾ ಪ್ರವಾಸೋದ್ಯಮ ತಾಣಗಳು |

**ಸೂಚನೆ :**

1. ಬೆಂಗಳೂರು ನಗರ ಜಿಲ್ಲೆಯಲ್ಲಿ ಬಂಡವಾಳ ಹೂಡಿಕೆ ಸಹಾಯಧನಕ್ಕೆ ಯಾವುದೇ ಪ್ರವಾಸೋದ್ಯಮ ಯೋಜನೆಯು ಅರ್ಹವಾಗಿಲ್ಲ.

2. ಹೋಟೆಲ್ ಯೋಜನೆ – ಬಜೆಟ್ ಮತ್ತು ಹೋಟೆಲ್ ಯೋಜನೆ–ಪ್ರೀಮಿಯಂಗೆ ಸಂಬಂಧಿಸಿದಂತೆ ಈ ಮುಂದಿನ ಷರತ್ತುಗಳು ಅನ್ವಯವಾಗತಕ್ಕದ್ದು.

[2] ಗ್ರೀನ್ ಫೀಲ್ಡ್ ಮತ್ತು ಫ್ರಾಂಚೈಸಿ ಮಾದರಿಗಳಲ್ಲಿ ಅಭಿವೃದ್ಧಿಪಡಿಸಲಾದ ರಸ್ತೆ ಬದಿ ಸೌಲಭ್ಯಗಳಿಗೆ ಮಾತ್ರ.

ಯೋಜನೆಗೆ ಸಂಬಂಧಿಸಿದ ಬ್ಯಾಂಕ್ ಸಾಲದ ಮೇಲಿನ ಬಡ್ಡಿ ಸಹಾಯಧನವು ವಾರ್ಷಿಕ 7.5 ಲಕ್ಷ ರೂಪಾಯಿಗಳನ್ನು ಮೀರತಕ್ಕದ್ದಲ್ಲ ಮತ್ತು ಇದನ್ನು ಬಡ್ಡಿ ಸಮೇತ ಸಾಲದ ಕಂತನ್ನು ಸಕಾಲದಲ್ಲಿ ಮರುಪಾವತಿ ಮಾಡಿದರೆ ಮಾತ್ರ ನೀಡಲಾಗುತ್ತದೆ. ಈ ಕೆಳಕಂಡ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದ ನೂತನ ಪ್ರವಾಸೋದ್ಯಮ ಯೋಜನೆ ಅಥವಾ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳ ಈ ನೀತಿಯ ಅಡಿಯಲ್ಲಿ ಬಡ್ಡಿ ಸಹಾಯಧನವನ್ನು ಪಡೆಯಲು ಅರ್ಹವಾಗಿರತಕ್ಕದ್ದು–

1. ಕೃಷಿ ಪ್ರವಾಸೋದ್ಯಮ ಯೋಜನೆ
2. ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ.
3. ಪಾರಂಪರಿಕ ಪ್ರವಾಸೋದ್ಯಮ ಯೋಜನೆ.
4. ಸುರಕ್ಷತಾ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆ

**ಸೂಚನೆ:**

1. ಬಡ್ಡಿ ಸಹಾಯಧನವನ್ನು ಪಡೆಯುತ್ತಿರುವ ಪ್ರವಾಸೋದ್ಯಮ ಯೋಜನೆಯು, ಬಂಡವಾಳ ಹೂಡಿಕೆ ಸಹಾಯಧನವನ್ನು ಕ್ಲೇಮು ಮಾಡಲು ಅರ್ಹವಾಗಿರತಕ್ಕದ್ದಲ್ಲ.

2. ಬಡ್ಡಿ ಸಹಾಯಧನಕ್ಕೆ ಅರ್ಹವಾಗಿರುವ ಪ್ರವಾಸೋದ್ಯಮ ಯೋಜನೆಗಳ ಮೇಲ್ಕಂಡ ಪಟ್ಟಿಯನ್ನು ಪ್ರವಾಸೋದ್ಯಮ ಇಲಾಖೆಯು ಕಾಲಕಾಲಕ್ಕೆ ಪರಿಶೀಲಿಸಿ, ಪರಿಷ್ಕರಿಸಬಹುದಾಗಿದ್ದು, ಅದಕ್ಕೆ ಮಾರುಕಟ್ಟೆ ಬೇಡಿಕೆ ಮತ್ತು ಉದ್ಯಮದ ಸಲಹೆ ಸೂಚನೆಗಳ ಅನುಸಾರ ಸೂಕ್ತ ಸೇರ್ಪಡೆಗಳು/ ಅಳಿಸುವಿಕೆಗಳು/ ಮಾರ್ಪಾಡುಗಳನ್ನು ಮಾಡಬಹುದಾಗಿದೆ.

## 14.3 ರಿಯಾಯಿತಿಗಳು

ಕರ್ನಾಟಕ ಸರ್ಕಾರವು, ರಾಜ್ಯದಲ್ಲಿ ನೂತನ ಪ್ರವಾಸೋದ್ಯಮ ಯೋಜನೆಗಳು ಹಾಗೂ ವಿಸ್ತರಿತ ಪ್ರವಾಸೋದ್ಯಮ ಯೋಜನೆಗಳಿಗಾಗಿ ಈ ಕೆಳಕಂಡ ರಿಯಾಯಿತಿಗಳನ್ನು ನೀಡುತ್ತದೆ –

### 14.3.1 ಮುದ್ರಾಂಕ ಶುಲ್ಕದ ಮೇಲೆ ವಿನಾಯಿತಿ

ನೂತನ ಪ್ರವಾಸೋದ್ಯಮ ಯೋಜನೆಗಳು ಮತ್ತು ಪ್ರವಾಸೋದ್ಯಮ ವಿಸ್ತರಣಾ ಯೋಜನೆಗಳು ಈ ಕೆಳಗಿನವುಗಳಿಗೆ ಸಂಬಂಧಿಸಿದಂತೆ ಶೇ.50ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ ಪಡೆಯಲು ಅರ್ಹವಾಗಿರುತ್ತವೆ.

1. ರಾಜ್ಯ ಸರ್ಕಾರ, ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಗಳು, ವಾಣಿಜ್ಯ ಬ್ಯಾಂಕುಗಳು, ಪ್ರಾದೇಶಿಕ ಗ್ರಾಮೀಣ ಬ್ಯಾಂಕು (ಆರ್.ಆರ್.ಬಿ)ಗಳು, ಸಹಕಾರ ಬ್ಯಾಂಕುಗಳು, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ (ಕೆವಿಐ)/ ಖಾದಿ ಮತ್ತು ಗ್ರಾಮೋದ್ಯೋಗ ಆಯೋಗ (ಕೆವಿಐಸಿ), ಕರ್ನಾಟಕ ರಾಜ್ಯ ಪ.ಜಾ/ಪ.ಪಂ.ಗಳ ಅಭಿವೃದ್ಧಿ ನಿಗಮ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ಮತ್ತು ಸರ್ಕಾರವು ಕಾಲಕಾಲಕ್ಕೆ ಗರಿಷ್ಠ 5 ವರ್ಷಗಳ ಅವಧಿಯವರೆಗೆ ಮಾತ್ರ ಅಧಿಸೂಚಿಸಬಹುದಾದ ಇತರೆ ಸಂಸ್ಥೆಗಳಿಂದ ಸಾಲವನ್ನು ಪಡೆಯುವುದಕ್ಕಾಗಿ ಮಾಡಿಕೊಂಡ ಸಾಲದ ಒಪ್ಪಂದ ಪತ್ರಗಳು, ಸಾಲಪತ್ರಗಳು, ಅಡಮಾನ ಮತ್ತು ಅಡವು ಪತ್ರಗಳು; ಮತ್ತು

2. ಪ್ರವಾಸೋದ್ಯಮ ಯೋಜನೆಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡಿರುವ ಗುತ್ತಿಗೆಪತ್ರಗಳು, ಗುತ್ತಿಗೆ ಮತ್ತು ಮಾರಾಟ ಹಾಗೂ ಶುದ್ಧ ಕ್ರಯಪತ್ರಗಳು.

---

[3] ಉದಾಹರಣೆಗೆ ಪ್ರವಾಸೋದ್ಯಮ ಯೋಜನೆಗೆ ರೂ. 10.00 ಲಕ್ಷಗಳನ್ನು ಶೇ 11 ರಷ್ಟು ವಾರ್ಷಿಕ ಬಡ್ಡಿದರದಲ್ಲಿ ಸಾಲವನ್ನು ಪಡೆದಿದ್ದಲ್ಲಿ ಇಲಾಖೆಯು, ಒಟ್ಟು ಪಾವತಿಸಬೇಕಾದ ಒಟ್ಟು ಬಡ್ಡಿ ರೂ. 1,10,000/–ಗಳಲ್ಲಿ ವಾರ್ಷಿಕ ಶೇ 5 ರಷ್ಟು ಬಡ್ಡಿಯನ್ನು ಅಂದರೆ 55,000/– ರೂಪಾಯಿಗಳ ಮೊತ್ತದವರೆಗೆ ಸಹಾಯಧನದ ರೂಪದಲ್ಲಿ ನೀಡುತ್ತದೆ.

#### 15.2.1. ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳ ಮಂಜೂರಾತಿಗಾಗಿ ದಸ್ತಾವೇಜುಗಳು

ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳ ಅನುಮೋದನೆಗಳನ್ನು ಪಡೆಯುವುದಕ್ಕಾಗಿ ದಸ್ತಾವೇಜುಗಳು ಈ ನೀತಿಯ ಕಾರ್ಯನಿರ್ವಹಣಾ ಮಾರ್ಗಸೂಚಿಗಳ ಅನ್ವಯ ಇರತಕ್ಕದ್ದು.

#### 15.2.2. ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಪಡೆಯುವುದಕ್ಕಾಗಿ ಪೂರಕ ಉಪಬಂಧಗಳು

1. ಪ್ರವಾಸೋದ್ಯಮ ಯೋಜನೆಯ ಅರ್ಜಿದಾರರು, ಈ ನೀತಿಯಲ್ಲಿ ಗುರುತಿಸಲಾದ ಅರ್ಹ ಪ್ರವಾಸೋದ್ಯಮ ಯೋಜನೆಗಳಿಗಾಗಿ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಪಡೆಯಲು ಅಗತ್ಯ ದಾಖಲೆಗಳನ್ನು ಸಲ್ಲಿಸಬೇಕು ಮತ್ತು ನೀತಿಯ ಕಾರ್ಯನಿರ್ವಹಣಾ ಮಾರ್ಗಸೂಚಿಗಳಲ್ಲಿ ನಿರ್ದಿಷ್ಟಪಡಿಸಿದ ಕಾಲಮಿತಿಗಳಿಗನುಸಾರ ಸಂಬಂಧಪಟ್ಟ ಸಮಿತಿಯಿಂದ ಅಗತ್ಯ ಅನುಮೋದನೆಗಳನ್ನು ಪಡೆಯತಕ್ಕದ್ದು.

2. ಈ ನೀತಿಯ ಅಧ್ಯಾಯ–14 –ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳು ಅಧ್ಯಾಯದ ಅಡಿಯಲ್ಲಿ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಕ್ಲೇಮು ಮಾಡುವುದಕ್ಕೆ ಪ್ರವಾಸೋದ್ಯಮ ಯೋಜನೆಯ ಅರ್ಜಿದಾರನು ಸಂಬಂಧಪಟ್ಟ ಸಮಿತಿಗೆ ಕಾರ್ಯಾಚರಣಾ ಮಾರ್ಗಸೂಚಿಗಳನುಸಾರ ಅಗತ್ಯವಾದ ದಾಖಲೆ, ಪುರಾವೆಗಳನ್ನು ಒದಗಿಸಬೇಕು. ಸಂಬಂಧಪಟ್ಟ ಸಮಿತಿಯ ಅನುಮೋದನೆಯಿಂದಾಗಿ ಅನುಮೋದಿತ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ವಿಲೆ ಮಾಡಲು ಪ್ರವಾಸೋದ್ಯಮ ಇಲಾಖೆಯು ಸಬಲಗೊಳ್ಳತಕ್ಕದ್ದು.

3. ಪ್ರವಾಸೋದ್ಯಮ ಯೋಜನೆಗಳು ಮತ್ತು ಪ್ರವಾಸೋದ್ಯಮ ಸೇವಾದಾತರು ಕರ್ನಾಟಕ ಸರ್ಕಾರ ಮತ್ತು/ ಅಥವಾ ಭಾರತ ಸರ್ಕಾರದ ವಿವಿಧ ಇಲಾಖೆಗಳ ಬಹುನೀತಿಗಳಡಿಯಲ್ಲಿ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳನ್ನು ಪಡೆಯಬಹುದು. ಆದಾಗ್ಯೂ, ವಿವಿಧ ನೀತಿಗಳಡಿಯಲ್ಲಿ ಒಂದೇ ಘಟಕಾಂಶಕ್ಕೆ ಕ್ಲೇಮು ಮಾಡಿದ್ದಲ್ಲಿ, ಪ್ರಮಾಣವನ್ನು ನೀತಿಯಲ್ಲಿನ ಯಾವುದೇ ಒಂದು ಘಟಕಾಂಶದ ಗರಿಷ್ಠ ಮೊತ್ತಕ್ಕೆ ಸೀಮಿತಗೊಳಿಸಲಾಗುತ್ತದೆ.

4. ಪ್ರವಾಸೋದ್ಯಮ ಯೋಜನೆಯು ಪಡೆದುಕೊಂಡ ಒಟ್ಟು ಸಹಾಯಧನಗಳು ಮತ್ತು ರಿಯಾಯಿತಿಗಳ ಪ್ರಮಾಣವು, ಯೋಜನೆಯ ಅರ್ಹ ಯೋಜನಾ ವೆಚ್ಚದ ಶೇ. 30 ರಷ್ಟನ್ನು ಮೀರತಕ್ಕದ್ದಲ್ಲ.

5. ಸಹಾಯಧನವನ್ನು ಪಡೆದುಕೊಳ್ಳುವ ಪ್ರವಾಸೋದ್ಯಮ ಯೋಜನೆಗಳು ನೂತನ ಪ್ರವಾಸೋದ್ಯಮ ಯೋಜನೆಯನ್ನು ಸ್ಥಾಪಿಸಲು ಅಥವಾ ವಿಸ್ತರಿತ ಪ್ರವಾಸೋದ್ಯಮ ಯೋಜನೆಯನ್ನು ವಿಸ್ತರಿಸುವುದಕ್ಕೆ ಸಂಬಂಧಪಟ್ಟ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮುಂಚೆ ಅನ್ವಯವಾಗಬಹುದಾದಂತಹ ಸಮಿತಿಯ ತಾತ್ವಿಕ ಅನುಮೋದನೆಯನ್ನು ಪಡೆದುಕೊಳ್ಳಬೇಕು.

6. ಸಹಾಯಧನಗಳನ್ನು ಸ್ವೀಕರಿಸುವ ಪ್ರವಾಸೋದ್ಯಮ ಯೋಜನೆಗಳಿಗಾಗಿ ಸಹಾಯಧನದ ಮೊದಲ ಕಂತನ್ನು ಸ್ವೀಕರಿಸಿದ ನಂತರ ಕನಿಷ್ಠ 3 ವರ್ಷಗಳ ಕಾಲ ಪ್ರವಾಸೋದ್ಯಮ ಯೋಜನೆಯನ್ನು ನಿರ್ವಹಿಸುವುದು ಕಡ್ಡಾಯವಾಗಿರತಕ್ಕದ್ದು. ಈ ಷರತ್ತುಗಳನ್ನು ಪೂರೈಸಲು ಪ್ರವಾಸೋದ್ಯಮ ಯೋಜನೆಯು ವಿಫಲವಾದರೆ, ಅರ್ಜಿದಾರನು ವಾರ್ಷಿಕ ಶೇ. 10ರಷ್ಟು ಸರಳ ಬಡ್ಡಿಯೊಂದಿಗೆ ಪ್ರವಾಸೋದ್ಯಮ ಇಲಾಖೆಗೆ ಸಹಾಯಧನದ ಮೊತ್ತವನ್ನು ಹಿಂತಿರುಗಿಸತಕ್ಕದ್ದು.

# 16 ಅನುಬಂಧಗಳು

**ಅನುಬಂಧಗಳು–ಎ: ಕರ್ನಾಟಕ ಪ್ರವಾಸೋದ್ಯಮ ನೀತಿ, 2020–26ರ ಅಡಿಯಲ್ಲಿ ಪ್ರೋತ್ಸಾಹಕಗಳು, ಸಹಾಯಧನಗಳು ಮತ್ತು ರಿಯಾಯಿತಿಗಳ ಮಂಜೂರಾತಿಗಾಗಿ ವಿಶೇಷ ಸಮಿತಿಗಳ ರಚನೆ –**

**1. ಜಿಲ್ಲಾ ಪ್ರವಾಸೋದ್ಯಮ ಸಮಿತಿ**

ಜಿಲ್ಲಾ ಪ್ರವಾಸೋದ್ಯಮ ಸಮಿತಿಗೆ, ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುತ್ತಾರೆ ಹಾಗೂ ಸಮಿತಿಯು ಆಯಾ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ:

- ಜಿಲ್ಲಾಧಿಕಾರಿ, ಅಧ್ಯಕ್ಷರು
- ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾಪಂಚಾಯತ್
- ನಗರ ಪಾಲಿಕೆಯ ಆಯುಕ್ತರು ಅಥವಾ ಪೌರಸಭಾ ಮುಖ್ಯಾಧಿಕಾರಿ
- ಪೊಲೀಸ್ ಅಧೀಕ್ಷಕರು/ ಪೊಲೀಸ್ ಆಯುಕ್ತರು
- ಉಪ ಅರಣ್ಯ ಸಂರಕ್ಷಣಾಧಿಕಾರಿ
- ಅಧಿಕಾರ ವ್ಯಾಪ್ತಿವುಳ್ಳ ಕಾರ್ಯನಿರ್ವಾಹಕ ಅಭಿಯಂತರರು, ವಿದ್ಯುತ್ ಸರಬರಾಜು ಕಂಪನಿ ನಿಯಮಿತ
- ಪ್ರಮುಖ ಬ್ಯಾಂಕಿನ ಜಿಲ್ಲಾ ಪ್ರಮುಖ ವ್ಯವಸ್ಥಾಪಕರು
- ಅಧಿಕಾರ ವ್ಯಾಪ್ತಿವುಳ್ಳ ಜಂಟಿ ಅಥವಾ ಉಪ–ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆ
- ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ
- ಸಹಾಯಕ ನಿರ್ದೇಶಕರು, ನಗರ ಯೋಜನೆ
- ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ
- ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಛೇರಿಯ ಪ್ರತಿನಿಧಿ
- ಉಪ ನಿರ್ದೇಶಕರು (ಪ್ರವಾಸೋದ್ಯಮ)
- ಜಿಲ್ಲಾಧಿಕಾರಿಗಳು ಅಗತ್ಯವೆಂದು ಭಾವಿಸುವ ಜಿಲ್ಲೆಯಿಂದ ಇತರೆ ಆಹ್ವಾನಿತರು
- ಜಿಲ್ಲೆಯ ಸಾರಿಗೆ, ಪ್ರವಾಸೋದ್ಯಮ ಮತ್ತು ಆತಿಥ್ಯ ವಲಯದ ಕನಿಷ್ಠ 3 ಮಂದಿ ಪ್ರತಿನಿಧಿಗಳು. ಆ ಪ್ರತಿನಿಧಿಗಳನ್ನು ಕರ್ನಾಟಕ ಪ್ರವಾಸೋದ್ಯಮ ಸಂಘವು (ಕೆಟಿಎಸ್) ನಾಮನಿರ್ದೇಶನ ಮಾಡತಕ್ಕದ್ದು.
- ಸಹಾಯಕ ನಿರ್ದೇಶಕರು, (ಪ್ರವಾಸೋದ್ಯಮ)/ ಪ್ರವಾಸೋದ್ಯಮ ಪ್ರಭಾರಿ ಅಧಿಕಾರಿ (ಸಂಚಾಲಕರು)

ಪ್ರತಿಯೊಂದು ಪ್ರಕರಣವನ್ನು ಆಧರಿಸಿ ಅಗತ್ಯಪಡಿಸಿದಂತೆ ಇತರೆ ಸದಸ್ಯರನ್ನು ವಿಶೇಷ ಆಹ್ವಾನಿತರಾಗಿ ಸೇರಿಸಿಕೊಳ್ಳಬಹುದು.

**2. ಪ್ರವಾಸೋದ್ಯಮ ಸಬಲೀಕರಣ ಸಮಿತಿ**

ಪ್ರವಾಸೋದ್ಯಮ ಸಬಲೀಕರಣ ಸಮಿತಿಗೆ ಕರ್ನಾಟಕ ಸರ್ಕಾರದ ಸನ್ಮಾನ್ಯ ಪ್ರವಾಸೋದ್ಯಮ ಸಚಿವರು ಅಧ್ಯಕ್ಷರಾಗಿರುತ್ತಾರೆ ಮತ್ತು ಸಮಿತಿಯು ಈ ಕೆಳಕಂಡ ಸದಸ್ಯರನ್ನು ಒಳಗೊಂಡಿರುತ್ತದೆ:

# ಅನುಬಂಧ-ಬಿ, ಸಂಕ್ಷಿಪ್ತಾಕ್ಷರಗಳು

| ಕ್ರಮ ಸಂಖ್ಯೆ | ಸಂಕ್ಷಿಪ್ತಾಕ್ಷರ | ವಿಸ್ತರಣೆ |
|---|---|---|
| 1. | ಎಎಸ್ಐ | ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ |
| 2. | ಎವೈಯುಎಸ್ಎಚ್ (ಆಯುಷ್) | ಆಯುರ್ವೇದ, ಯೋಗ ಮತ್ತು ನ್ಯಾಚುರೋಪತಿ, ಯುನಾನಿ, ಸಿದ್ಧ ಮತ್ತು ಹೋಮಿಯೋಪತಿ |
| 3. | ಬಿ2ಬಿ | ಬಿಸಿನೆಸ್ 2 ಬಿಸಿನೆಸ್ |
| 4. | ಸಿಎಸ್ಆರ್ | ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ |
| 5. | ಡಿಒಟಿ | ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ |
| 6. | ಎಸ್‌ಟಿಡಿ | ಪ್ರಮುಖ ಪ್ರವಾಸೋದ್ಯಮ ತಾಣ |
| 7. | ಇಒಡಿ | ಸುಲಲಿತ ವ್ಯವಹಾರ |
| 8. | ಇಪಿಸಿ | ಅರ್ಹ ಪ್ರವಾಸೋದ್ಯಮ ವೆಚ್ಚ |
| 9. | ಜಿಒಕೆ | ಕರ್ನಾಟಕ ಸರ್ಕಾರ |
| 10. | ಜಿಎಸ್‌ಡಿಪಿ | ಒಟ್ಟು ರಾಜ್ಯ ದೇಶಿಯ ಉತ್ಪನ್ನ |
| 11. | ಜಿಎಸ್‌ಟಿ | ಸರಕು ಮತ್ತು ಸೇವೆಗಳ ತೆರಿಗೆ |
| 12. | ಐಸಿಟಿ | ಮಾಹಿತಿ ಮತ್ತು ಸಂಪರ್ಕ ತಂತ್ರಜ್ಞಾನ |
| 13. | ಜೆಎಸ್ಆರ್ | ಜಂಗಲ್ ಲಾಡ್ಜ್‌ಗಳು ಮತ್ತು ರೆಸಾರ್ಟ್‌ಗಳ ನಿಯಮಿತ |
| 14. | ಜೆವಿ | ಜಂಟಿ ಉದ್ಯಮ |
| 15. | ಕೆಇಎ | ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ |
| 16. | ಕೆಐಟಿಇ | ಕರ್ನಾಟಕ ಅಂತಾರಾಷ್ಟ್ರೀಯ ಟ್ರಾವೆಲ್ ಎಕ್ಸ್‌ಪೋ |
| 17. | ಕೆಎಸ್‌ಟಿಡಿಸಿ | ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ |
| 18. | ಕೆಟಿಐಎಲ್ | ಕರ್ನಾಟಕ ಪ್ರವಾಸೋದ್ಯಮ ಮೂಲಸೌಕರ್ಯ ನಿಯಮಿತ |
| 19. | ಕೆಟಿಎಸ್ | ಕರ್ನಾಟಕ ಪ್ರವಾಸೋದ್ಯಮ ಸೊಸೈಟಿ |
| 20. | ಕೆಯುಎಂ | ಕರ್ನಾಟಕ ಉದ್ಯೋಗ ಮಿತ್ರ |
| 21. | ಎಂಡಿಎ | ಮಾರುಕಟ್ಟೆ ಅಭಿವೃದ್ಧಿ ನೆರವು |
| 22. | ಎಂಐಸಿಇ | ಸಭೆಗಳು, ಪ್ರೋತ್ಸಾಹಕಗಳು, ಸಮ್ಮೇಳನಗಳು ಮತ್ತು ಪ್ರದರ್ಶನಗಳು |
| 23. | ಎಂಒಟಿ | ಭಾರತ ಸರ್ಕಾರದ ಪ್ರವಾಸೋದ್ಯಮ ಮಂತ್ರಾಲಯ |
| 24. | ಎನ್‌ಸಿ | ನಿರಾಕ್ಷೇಪಣಾ ಪತ್ರ |
| 25. | ಪಿಎಂಯು | ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಕಾರ್ಯಕ್ರಮ ನಿರ್ವಹಣಾ ಘಟಕ ವಿಭಾಗ |
| 26. | ಪಿಪಿಪಿ | ಸಾರ್ವಜನಿಕ ಖಾಸಗಿ ಸಹಭಾಗಿತ್ವ |
| 27. | ಪಿಎಸ್‌ಯು | ಸಾರ್ವಜನಿಕ ವಲಯ ಉದ್ಯಮ |
| 28. | ಎಸ್‌ಡಿಇಎಲ್ | ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ |
| 29. | ಎಸ್‌ಡಿಜಿ | ವಿಶ್ವಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳು |
| 30. | ಯುಎಸ್‌ಬಿ | ನಗರ ಸ್ಥಳೀಯ ನಿಕಾಯಗಳು |
| 31. | ಯುಎಸ್‌ಇಎಸ್‌ಸಿಒ | ಯುನೆಸ್ಕೋ |
| 32. | ಯುಎಸ್‌ಡಬ್ಲ್ಯೂಒ | ವಿಶ್ವ ಪ್ರವಾಸೋದ್ಯಮ ಸಂಸ್ಥೆ |

-1-

## PROCEEDINGS OF GOVERNMENT OF KARNATAKA

Sub: Implementation of Karnataka Tourism Policy 2020-25.
Read: Government Order No. PraE 81 Pravayo 2014 dated 26.03.2015

******

**PREAMBLE:-**

In the Government Order read above, Karnataka Tourism Policy 2015-20 was introduced. The period of the Policy has ended on 26.03.2020.

Karnataka is the most preferred tourism destination that provides a safe and memorable experience for tourists through diverse high-quality tourism offerings developed in collaboration with tourism stakeholders and local communities to create sustainable and inclusive socio-economic development for all.

As the logo of Karnataka tourism says it all **"One State, Many Worlds"**, Karnataka Tourism is home for varied tourism themes including heritage, culture, eco-tourism, wildlife, spiritual, adventure, coastal, wellness and agri. tourism in urban and rural areas. Tourism is a priority sector for the Government of Karnataka and the State has undertaken significant investments for the development and promotion of tourism. In 2018, Karnataka ranked 3rd among all Indian states for domestic tourist visits, attracting more than 21.50 crore visitors or 12% of overall domestic tourists visits in India. Additionally, the State ranked 11th for international tourist visits in India, attracting nearly 5.5 lakh foreign tourists.

Implementation of Karnataka Tourism Policy 2020-25 envisages to boost the tourism industry in State by increasing domestic and international visitations, offering high quality experience to visitors, facilitating and accelerating investments and improving livelihood opportunities at the local level.

It is imperative for the state government to periodically review their existing tourism policy and in the backdrop of the extent to which the existing policy has been able to achieve its objectives. The main purpose of the Karnataka Tourism Policy 2020-25 is to comprehensively develop Karnataka Tourism which includes:

1. Promote Karnataka as an attractive tourism destination and place it prominently on the domestic and global tourism map.
2. Develop tourism as a significant driver of inclusive socio-economic development for Karnataka.
3. Augment the development of robust tourism infrastructure across Karnataka by providing world-class experience to visitors through a diverse array of high-quality products and services.
4. Ensure coordinated and active involvement of all stakeholders for the improvement of tourism in Karnataka.
5. Provide a conducive business environment with investment-friendly policies to encourage private sector participation in the tourism sector.

The objectives of Karnataka Tourism Policy 2020-25 are –

1. To harness Karnataka's tourism potential for its effects on employment generation and economic development.
2. To instil confidence in tourists to visit Karnataka and ensure their comfort, convenience, and safety throughout their journey in Karnataka.
3. To promote Karnataka in domestic and international markets through a multitude of marketing channels.
4. To ensure quality tourism infrastructure and basic amenities for tourists at and en- route to major tourism destinations across Karnataka.
5. To create an enabling framework for private sector investments and establish mechanisms to support industry-driven initiatives in tourism.
6. To encourage sustainable development in tourism towards achievement of the United Nations' Sustainable Development Goals for Karnataka.

**Incentives, Subsidies and Concessions under Karnataka Tourism Policy 2020-25**

The Karnataka Tourism Policy provides a wide range of incentives, subsidies and concessions for Tourism Projects and Tourism Service Providers. The eligibility of Tourism Projects for various Incentives, Subsidies and Concessions is provided in Annexure-II.

- Incentives
  - Registration of Tourism Projects and Tourism Service Providers
  - Facilitation Support
  - Marketing Support for Tourism
  - Special Recognition for Sustainability Measures
  - Assistance for Sustainability Initiatives
  - Collaboration with Tourism Aggregators and Online Travel Agents
  - Facilitate Inter-State Travel for Tourist Vehicles
  - Marketing Development Assistance
  - Tourism Excellence Awards
  - Support for Homestays
- Subsidies
  - Capital Investment Subsidy for Adventure Tourism Project, Caravan Park Project, Hotel Project – Budget (1-star or 2-star classification hotels / resorts), Hotel Project – Premium (3-star or above classification hotels / resorts), Houseboat Project, Wayside Amenities and Wellness Centre
  - Interest Subsidy for Agri Tourism Project, Cultural Tourism Project, Heritage Tourism Project, Safety and Hygiene Tourism Project
- Concessions
  - Exemption on Stamp Duty
  - Concessional Registration Charges
  - Reimbursement of Land Conversion Fee
  - Exemption on Motor Vehicle Tax
  - Complementary Infrastructure Assistance

12. PS to Chief Secretary to Government (Cabinet), Vidhana Soudha (Subject No.C-458/2020).
13. PS to Hon'ble Minister for Tourism and Kannada Culure and Youth Services and Sports, Vidhana Soudha.
14. President, Karnataka Tourism Society, Bengaluru.
15. Section Guard File/Spare copies.

- I -

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ನ್ನು ಜಾರಿಗೆ ತರಲು ಅನುಮೋದನೆ.

ಓದಲಾಗಿದೆ: ಸರ್ಕಾರದ ಆದೇಶ ಸಂಖ್ಯೆ: ಪ್ರಇ 81 ಪ್ರವಾಯೋ 2014, ದಿನಾಂಕ: 26-03-2015.

*****

**ಪ್ರಸ್ತಾವನೆ:**

ಮೇಲೆ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ 2015-20ನ್ನು ಜಾರಿಗೆ ತರಲಾಗಿತ್ತು. ಸದರಿ ನೀತಿಯು ದಿನಾಂಕ: 26-03-2020ಕ್ಕೆ ಕೊನೆಗೊಂಡಿರುತ್ತದೆ.

ಪ್ರವಾಸಿಗರಿಗೆ ಸುಸ್ಥಿರ ಮತ್ತು ಅಂತರ್ಗತ ಸಾಮಾಜಿಕ-ಆರ್ಥಿಕ ಅಭಿವೃದ್ಧಿಯನ್ನು ಸೃಷ್ಟಿಸಲು ಪ್ರವಾಸೋದ್ಯಮ ಪಾಲುದಾರರ ಮತ್ತು ಸ್ಥಳೀಯ ಸಮುದಾಯಗಳ ಸಹಯೋಗದೊಂದಿಗೆ ಪ್ರವಾಸೋದ್ಯಮ ತಾಣಗಳನ್ನು ವೈವಿಧ್ಯಮಯ ಮತ್ತು ಉನ್ನತ ಗುಣಮಟ್ಟಕ್ಕೆ ಅಭಿವೃದ್ಧಿಪಡಿಸಿ ಪ್ರವಾಸಿಗರಿಗೆ ಸುರಕ್ಷಿತ ಹಾಗೂ ಸ್ಮರಣೀಯ ಅನುಭವವನ್ನು ನೀಡುತ್ತಿರುವುದರಿಂದ ಕರ್ನಾಟಕ ರಾಜ್ಯವು ಪ್ರವಾಸಿಗರಿಗೆ ಅತ್ಯಂತ ಆದ್ಯತೆಯ ಪ್ರವಾಸೋದ್ಯಮ ತಾಣವಾಗಿದೆ.

ಕರ್ನಾಟಕದ ಪ್ರವಾಸೋದ್ಯಮ ಘೋಷಣೆಯು "ಒಂದು ರಾಜ್ಯ, ಹಲವು ಜಗತ್ತುಗಳು" ಎಂದು ಹೇಳುವಂತೆ, ಕರ್ನಾಟಕ ಪ್ರವಾಸೋದ್ಯಮವು ಪರಂಪರೆ, ಸಂಸ್ಕೃತಿ, ಪರಿಸರ ಪ್ರವಾಸೋದ್ಯಮ, ವನ್ಯಜೀವಿ, ಆಧ್ಯಾತ್ಮಿಕ, ಸಾಹಸ, ಕರಾವಳಿ, ಕ್ಷೇಮ ಮತ್ತು ಕೃಷಿ ಸೇರಿದಂತೆ ಎಲ್ಲಾ ರೀತಿಯ ಪ್ರವಾಸೋದ್ಯಮ ವಿಷಯಗಳಿಗೆ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪ್ರವಾಸೋದ್ಯಮವು ಕರ್ನಾಟಕ ಸರ್ಕಾರಕ್ಕೆ ಆದ್ಯತೆಯ ಕ್ಷೇತ್ರವಾಗಿರುತ್ತದೆ. ರಾಜ್ಯದಲ್ಲಿ ಪ್ರವಾಸೋದ್ಯಮದ ಅಭಿವೃದ್ಧಿ ಮತ್ತು ಉತ್ತೇಜನಕ್ಕಾಗಿ ಮಹತ್ವದ ಹೂಡಿಕೆಗಳನ್ನು ಕೈಗೊಂಡಿದೆ. ಭಾರತದ ಎಲ್ಲಾ ರಾಜ್ಯಗಳಿಗೆ ಹೋಲಿಸಿದ್ದಲ್ಲಿ, 2018ರಲ್ಲಿ ಕರ್ನಾಟಕ ದೇಶೀಯ ಪ್ರವಾಸಿಗರು ಭೇಟಿ ನೀಡಿರುವಲ್ಲಿ 3ನೇ ಸ್ಥಾನದಲ್ಲಿರುವುದರ ಜೊತೆಗೆ 21.50ಕೋಟಿಗೂ ಹೆಚ್ಚು ಪ್ರವಾಸಿಗರನ್ನು ಅಂದರೆ ಭಾರತದ ಒಟ್ಟಾರೆ ದೇಶಿಯ ಪ್ರವಾಸಿಗರ ಭೇಟಿಯಲ್ಲಿ 12%ರಷ್ಟು ಜನರನ್ನು ಆಕರ್ಷಿಸಿರುತ್ತದೆ. ಇದಲ್ಲದೇ, ಭಾರತಕ್ಕೆ ಭೇಟಿ ನೀಡುವ ಅಂತರರಾಷ್ಟ್ರೀಯ ಪ್ರವಾಸಿಗರ ಪಟ್ಟಿಯಲ್ಲಿ ರಾಜ್ಯವು 11ನೇ ಸ್ಥಾನದಲ್ಲಿದ್ದು, ಸುಮಾರು 5.5 ಲಕ್ಷ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ನ್ನು ಜಾರಿಗೊಳಿಸುವುದರಿಂದ, ದೇಶಿಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರಿಗೆ ಉತ್ತಮ ಗುಣಮಟ್ಟದ ಅನುಭವವನ್ನು ನೀಡುವ ಮೂಲಕ, ಪ್ರವಾಸಿಗರ ಭೇಟಿಗಳು ಹೆಚ್ಚಳವಾಗುವುದರ ಜೊತೆಗೆ ಹೂಡಿಕೆಗಳಿಗೆ ಅನುಕೂಲ ಮತ್ತು ಹೂಡಿಕೆಯ ವೇಗವನ್ನು ನೀಡುವುದು. ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಹೆಚ್ಚಿಸಲು ಉದ್ದೇಶಿಸಿರುವುದರಿಂದ ಸ್ಥಳೀಯ ಮಟ್ಟದಲ್ಲಿ ಜೀವನೋಪಾಯದ ಅವಕಾಶಗಳು ಸುಧಾರಿಸುತ್ತವೆ.

ರಾಜ್ಯ ಸರ್ಕಾರವು ಪ್ರಚಲಿತದಲ್ಲಿರುವ ಪ್ರವಾಸೋದ್ಯಮ ನೀತಿಯಲ್ಲಿನ ಉದ್ದೇಶಗಳು ಎಷ್ಟರ ಮಟ್ಟಿಗೆ ಸಾಧನೆಯಾಗಿದೆ ಎಂಬ ಬಗ್ಗೆ ನಿಯತಕಾಲಿವಾಗಿ ಪರಿಶೀಲಿಸುವುದು ಕಡ್ಡಾಯವಾಗಿದೆ. ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರ ಮುಖ್ಯ ಉದ್ದೇಶ ಕರ್ನಾಟಕದ ಪ್ರವಾಸೋದ್ಯಮದ ವಲಯವನ್ನು ಈ ಕೆಳಕಂಡ ಅಂಶಗಳನ್ನೊಳಗೊಂಡಂತೆ ಸಮಗ್ರವಾಗಿ ಅಭಿವೃದ್ಧಿಗೊಳಿಸುವುದಾಗಿದೆ:-

1. ಕರ್ನಾಟಕವನ್ನು ಆಕರ್ಷಕ ಪ್ರವಾಸೋದ್ಯಮ ತಾಣವಾಗಿ ಉತ್ತೇಜಿಸುವುದು ಮತ್ತು ದೇಶೀಯ ಮತ್ತು ಜಾಗತಿಕ ಪ್ರವಾಸೋದ್ಯಮ ನಕ್ಷೆಯಲ್ಲಿ ಪ್ರಮುಖವಾಗಿ ಇರಿಸುವುದು.
2. ಕರ್ನಾಟಕದ ಸಾಮಾಜಿಕ ಆರ್ಥಿಕ ಅಭಿವೃದ್ಧಿಯನ್ನು ಒಳಗೊಂಡಂತೆ ಮಹತ್ವದ ಮುಂಚೂಣಿಯಾಗಿ

ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವುದು.

3. ವೈವಿಧ್ಯಮಯ ಉನ್ನತ-ಗುಣಮಟ್ಟದ ಉತ್ಪನ್ನಗಳು ಮತ್ತು ಸೇವೆಗಳ ಮೂಲಕ ಪ್ರವಾಸಿಗರಿಗೆ ವಿಶ್ವ ದರ್ಜೆಯ ಅನುಭವವನ್ನು ನೀಡುವ ಮೂಲಕ ಕರ್ನಾಟಕದಾದ್ಯಂತ ಧೃಡವಾದ ಪ್ರವಾಸೋದ್ಯಮ ಮೂಲಸೌಕರ್ಯಗಳ ಅಭಿವೃದ್ಧಿಯನ್ನು ಹೆಚ್ಚಿಸುವುದು.
4. ಕರ್ನಾಟಕ ಪ್ರವಾಸೋದ್ಯಮದ ಸುಧಾರಣೆಗೆ ಎಲ್ಲಾ ಪಾಲುದಾರರ ಸಂಘಟಿತ ಮತ್ತು ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳುವುದು.
5. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಖಾಸಗಿ ವಲಯದ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಹೂಡಿಕೆ-ಸ್ನೇಹಿ ನೀತಿಗಳೊಂದಿಗೆ ಅನುಕೂಲಕರ ವ್ಯಾಪಾರ ವಾತಾವರಣವನ್ನು ಒದಗಿಸುವುದು.

ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರ ಉದ್ದೇಶಗಳು

1. ಕರ್ನಾಟಕದ ಪ್ರವಾಸೋದ್ಯಮ ಸಾಮರ್ಥ್ಯವನ್ನು ಸಜ್ಜುಗೊಳಿಸಿ ಇದರ ಪರಿಣಾಮದಿಂದ ಉದ್ಯೋಗದ ಸೃಷ್ಟಿ ಮತ್ತು ಆರ್ಥಿಕ ಅಭಿವೃದ್ಧಿಗೊಳಿಸುವುದು.
2. ಕರ್ನಾಟಕಕ್ಕೆ ಭೇಟಿ ನೀಡುವ ಪ್ರವಾಸಿಗರಲ್ಲಿ ಆತ್ಮವಿಶ್ವಾಸ ತುಂಬಿ, ಅವರ ಕರ್ನಾಟಕದಾದ್ಯಂತ ಪ್ರಯಾಣದಲ್ಲಿ ಆರಾಮದಾಯಕ ಅನುಕೂಲತೆ ಮತ್ತು ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವುದು.
3. ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಕರ್ನಾಟಕವನ್ನು ಬಹುಸಂಖ್ಯೆಯ ಮಾರ್ಕೆಟಿಂಗ್ ಚಾನೆಲ್‌ಗಳ ಮೂಲಕ ಉತ್ತೇಜಿಸುವುದು.
4. ಕರ್ನಾಟಕದಾದ್ಯಂತದ ಪ್ರಮುಖ ಪ್ರವಾಸೋದ್ಯಮ ತಾಣಗಳಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಗುಣಮಟ್ಟದ ಪ್ರವಾಸೋದ್ಯಮ ಮೂಲಸೌಕರ್ಯ ಮತ್ತು ಮೂಲಭೂತ ಸೌಕರ್ಯಗಳನ್ನು ಖಚಿತಪಡಿಸಿಕೊಳ್ಳುವುದು.
5. ಖಾಸಗಿ ವಲಯದ ಹೂಡಿಕೆಗಳಿಗೆ ಅನುವು ಮಾಡಿಕೊಡುವ ಚೌಕಟ್ಟನ್ನು ರಚಿಸುವುದು ಮತ್ತು ಪ್ರವಾಸೋದ್ಯಮದಲ್ಲಿ ಉದ್ಯಮ-ಚಾಲಿತ ಉಪಕ್ರಮಗಳನ್ನು ಬೆಂಬಲಿಸುವ ಕಾರ್ಯವಿಧಾನಗಳನ್ನು ಸ್ಥಾಪಿಸುವುದು.
6. ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿಗಳ ಸಾಧನೆಯತ್ತ ಕರ್ನಾಟಕದ ಪ್ರವಾಸೋದ್ಯಮದಲ್ಲಿನ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುವುದು.

ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರ ಅಡಿಯಲ್ಲಿ ಪ್ರೋತ್ಸಾಹ, ಸಬ್ಸಿಡಿ ಮತ್ತು ರಿಯಾಯಿತಿಗಳು

- ಪ್ರೋತ್ಸಾಹಧನ
  - ಪ್ರವಾಸೋದ್ಯಮ ಯೋಜನೆಗಳು ಮತ್ತು ಪ್ರವಾಸೋದ್ಯಮ ಸೇವಾ ಪೂರೈಕೆದಾರರ ನೋಂದಣಿ
  - ಸೌಲಭ್ಯ ಬೆಂಬಲ
  - ಪ್ರವಾಸೋದ್ಯಮದ ಮಾರ್ಕೆಟಿಂಗ್ ಬೆಂಬಲ
  - ಸುಸ್ಥಿರತೆ ಕ್ರಮಗಳಿಗೆ ವಿಶೇಷ ಗುರುತಿಸುವಿಕೆ
  - ಸುಸ್ಥಿರತೆ ಉಪಕ್ರಮಗಳಿಗೆ ಸಹಾಯ
  - ಪ್ರವಾಸೋದ್ಯಮ ವಲಯದ ಅಗ್ರೀಗೇಟರ್ಸ್ ಮತ್ತು ಆನ್‌ಲೈನ್ ಪ್ರಯಾಣ ಏಜೆಂಟರೊಂದಿಗೆ ಸಹಯೋಗ
  - ಪ್ರವಾಸಿ ವಾಹನಗಳಿಗೆ ಅಂತರರಾಜ್ಯ ಪ್ರಯಾಣವನ್ನು ಸುಗಮಗೊಳಿಸುವುದು.
  - ಮಾರ್ಕೆಟಿಂಗ್ ಅಭಿವೃದ್ಧಿ ನೆರವು
  - ಪ್ರವಾಸೋದ್ಯಮ ಶ್ರೇಷ್ಠ ಪ್ರಶಸ್ತಿಗಳು
  - ಹೋಂಸ್ಟೇಗಳಿಗೆ ಬೆಂಬಲ
- ಸಬ್ಸಿಡಿಗಳು
  - ಸಾಹಸ ಪ್ರವಾಸೋದ್ಯಮ ಯೋಜನೆ, ಕಾರವಾನ್ ಪಾರ್ಕ್ ಯೋಜನೆ, ಹೋಟೆಲ್ ಯೋಜನೆ - ಬಜೆಟ್ (1-ಸ್ಟಾರ್ ಅಥವಾ 2-ಸ್ಟಾರ್ ವರ್ಗೀಕರಣ ಹೋಟೆಲ್‌ಗಳು / ರೆಸಾರ್ಟ್‌ಗಳು) ಹೋಟೆಲ್ ಪ್ರಾಜೆಕ್ಟ್ - ಪ್ರೀಮಿಯಂ (3-ಸ್ಟಾರ್ ಅಥವಾ ಮೇಲಿನ ವರ್ಗೀಕರಣ ಹೋಟೆಲ್‌ಗಳು / ರೆಸಾರ್ಟ್‌ಗಳು), ಹೌಸ್‌ಬೋಟ್ ಪ್ರಾಜೆಕ್ಟ್, ರಸ್ತೆಬದಿ ಸೌಲಭ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳು ಇವುಗಳಿಗೆ ಬಂಡವಾಳ ಹೂಡಿಕೆ ಸಬ್ಸಿಡಿ ಸೌಲಭ್ಯಗಳು
  - ಕೃಷಿ ಪ್ರವಾಸೋದ್ಯಮ ಯೋಜನೆ, ಸಾಂಸ್ಕೃತಿಕ ಪ್ರವಾಸೋದ್ಯಮ ಯೋಜನೆ, ಪರಂಪರೆ ಪ್ರವಾಸೋದ್ಯಮ ಯೋಜನೆ, ಸುರಕ್ಷತೆ ಮತ್ತು ನೈರ್ಮಲ್ಯ ಪ್ರವಾಸೋದ್ಯಮ ಯೋಜನೆಗೆ ಬಡ್ಡಿ ಸಹಾಯಧನ

➢ ರಿಯಾಯಿತಿಗಳು

- ಸ್ಟ್ಯಾಂಪ್ ಡ್ಯೂಟಿ ವಿನಾಯಿತಿ
- ನೋಂದಣಿ ಶುಲ್ಕದ ರಿಯಾಯಿತಿ
- ಭೂ ಪರಿವರ್ತನೆ ಶುಲ್ಕದ ಮರುಪಾವತಿ
- ಮೋಟಾರು ವಾಹನ ತೆರಿಗೆ ವಿನಾಯಿತಿ
- ಪೂರಕ ಮೂಲಸೌಕರ್ಯ ಸಹಕಾರ.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ವಿವಿಧ ಹೂಡಿಕೆ, ಸೇವಾವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸುವ ಅಗತ್ಯ ಇರುತ್ತದೆ. ಸದರಿ ಮಾರ್ಗಸೂಚಿಗಳನ್ನು ಅನುಸರಣೆ ಮಾಡುವ ಅರ್ಹರಿಗೆ ಬಂಡವಾಳ ಸಹಾಯಧನ ಮತ್ತು ರಿಯಾಯಿತಿಗಳನ್ನು ಹೊಂದುವುದು ಈ ನೀತಿಯಲ್ಲಿ ಅವಶ್ಯವಾಗಿರುತ್ತದೆ.

ಮೇಲಿನ ಅಂಶಗಳನ್ನು/ವಿವರಗಳನ್ನು ಪ್ರವಾಸೋದ್ಯಮ ನೀತಿಯಲ್ಲಿ ಅಳವಡಿಸಿ ಪ್ರವಾಸೋದ್ಯಮ ನೀತಿಯನ್ನು ಪ್ರಕಟಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಟಿಓಆರ್ 135 ಟಿಡಿಬಿ 2020,**

**ಬೆಂಗಳೂರು, ದಿನಾಂಕ: 18-09-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಂತೆ ರೂಪಿಸಿ, ಸದರಿ ನೀತಿಯಲ್ಲಿ ಅಳವಡಿಸಲಾಗಿರುವ ಪ್ರೋತ್ಸಾಹಧನ, ರಿಯಾಯಿತಿ ಮತ್ತು ಸಬ್ಸಿಡಿಗಳೊಂದಿಗೆ ಜಾರಿಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಸದರಿ ಪ್ರವಾಸೋದ್ಯಮ ನೀತಿ ಈ ಆದೇಶ ಜಾರಿಗೆ ಬಂದ ದಿನಾಂಕದಿಂದ 05 ವರ್ಷಗಳ ಅವಧಿಗೆ ಜಾರಿಯಲ್ಲಿರುತ್ತದೆ.

ಅನುಬಂಧದಲ್ಲಿರುವ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ಪೂರಕವಾಗಿ ಪ್ರವಾಸೋದ್ಯಮ ಕ್ಷೇತ್ರದಲ್ಲಿನ ವಿವಿಧ ಹೂಡಿಕೆ, ಸೇವಾವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು.

ಪ್ರವಾಸೋದ್ಯಮ ನೀತಿಯನ್ವಯ ಲಭ್ಯವಾಗುವ ವಿವಿಧ ಪ್ರೋತ್ಸಾಹಧನ, ಸಬ್ಸಿಡಿಗಳು ಮತ್ತು ರಿಯಾಯಿತಿಗಳ ಕುರಿತು ಕಾರ್ಯಾಚರಣೆ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಲ್ಲಿ ಪ್ರವಾಸೋದ್ಯಮಕ್ಕೆ ಅನ್ವಯಿಸಿದ ಯೋಜನೆಗಳಿಗೆ ಸಂಬಂಧಿಸಿದಂತೆ ಇತರೆ ಇಲಾಖೆಗಳಿಂದ ನೀಡಲಾಗುವ ಸೌಲಭ್ಯ ಬೆಂಬಲ ಮತ್ತು ರಿಯಾಯಿತಿಗಳು ಹಾಗೂ ಮಾರ್ಗಸೂಚಿಗಳ ಕುರಿತು ಸಂಬಂಧಿಸಿದ ಇಲಾಖೆಗಳು ಪ್ರತ್ಯೇಕ ಆದೇಶಗಳನ್ನು ಹೊರಡಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಬಿ.ಎನ್.ಯತಿರಾಜ್) 18/9/2020
ಸರ್ಕಾರದ ಉಪ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ.

**ಇವರಿಗೆ:**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಒದಗಿಸಲು ಕೋರಿದೆ.

**ಪ್ರತಿ:**

1. ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.

2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
3. ಅಧ್ಯಕ್ಷರು, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಟಾಸ್ಕ್ ಫೋರ್ಸ್, ಬೆಂಗಳೂರು .
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
8. ವ್ಯವಸ್ಥಾಪಕ ನಿರ್ದೇಶಕರು, ಅರಣ್ಯ ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ, ಖನಿಜ ಭವನ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
10. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು.
11. ಎಲ್ಲಾ ಜಿಲ್ಲೆಗಳ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಮುಖ್ಯಸ್ಥರು.
12. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ (ಸಚಿವ ಸಂಪುಟ) ವಿಧಾನಸೌಧ (ಪ್ರಕರಣ ಸಂಖ್ಯೆ: ಸಿ:458/2020), ವಿಧಾನಸೌಧ.
13. ಮಾನ್ಯ ಪ್ರವಾಸೋದ್ಯಮ ಹಾಗೂ ಕನ್ನಡ ಮತ್ತು ಸಂಸ್ಕೃತಿ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
14. ಅಧ್ಯಕ್ಷರು, ಕರ್ನಾಟಕ ಟೂರಿಸಂ ಸೊಸೈಟಿ, ಬೆಂಗಳೂರು.
15. ಶಾಖಾರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

**<u>ಕರ್ನಾಟಕ ಸರ್ಕಾರದ ನಡವಳಿಗಳು</u>**

**ವಿಷಯ:** ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ನ್ನು ಪರಿಷ್ಕರಿಸುವ ಬಗ್ಗೆ.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಟಿಒಆರ್ 135 ಟಿಡಿಬಿ 2020, ದಿನಾಂಕ: 18-09-2020.
2. ಮಾನ್ಯ ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:24.06.2021ರಂದು ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರ ಕಾರ್ಯವಿಧಾನ ಮಾರ್ಗಸೂಚಿಗಳ ಬಗ್ಗೆ ಹಾಗೂ ಇಲಾಖಾ ಪ್ರಗತಿ ಪರಿಶೀಲನೆ ಕುರಿತು ನಡೆದ ಸಭೆಯ ನಡವಳಿಗಳು.

11 MAR 2022

*****

**<u>ಪ್ರಸ್ತಾವನೆ:</u>**

ಮೇಲೆ ಓದಲಾದ ಕ್ರಮ ಸಂಖ್ಯೆ: 1ರ ಆದೇಶದಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ನ್ನು ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಂತೆ ರೂಪಿಸಿ, ಸದರಿ ನೀತಿಯಲ್ಲಿ ಅಳವಡಿಸಲಾಗಿರುವ ಪ್ರೋತ್ಸಾಹಧನ, ರಿಯಾಯಿತಿ ಮತ್ತು ಸಬ್ಸಿಡಿಗಳೊಂದಿಗೆ ಜಾರಿಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ. ಸದರಿ ಪ್ರವಾಸೋದ್ಯಮ ನೀತಿಯು ಈ ಆದೇಶ ಜಾರಿಗೆ ಬಂದ ದಿನಾಂಕದಿಂದ 05 ವರ್ಷಗಳ ಅವಧಿವರೆಗೆ ಜಾರಿಯಲ್ಲಿರುತ್ತದೆ.

ಅನುಬಂಧದಲ್ಲಿರುವ ಪ್ರವಾಸೋದ್ಯಮ ಯೋಜನೆಗಳ ಅಭಿವೃದ್ಧಿಗೆ ಪೂರಕವಾಗಿ ಪ್ರವಾಸೋದ್ಯಮ ಕ್ಷೇತ್ರದಲ್ಲಿನ ವಿವಿಧ ಹೂಡಿಕೆ, ಸೇವಾವರ್ಗಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ, ಸಕ್ಷಮ ಪ್ರಾಧಿಕಾರದಿಂದ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು. ಪ್ರವಾಸೋದ್ಯಮ ನೀತಿಯನ್ವಯ ಲಭ್ಯವಾಗುವ ವಿವಿಧ ಪ್ರೋತ್ಸಾಹಧನ ಸಬ್ಸಿಡಿಗಳು ಮತ್ತು ರಿಯಾಯಿತಿಗಳ ಕುರಿತು ಕಾರ್ಯಾಚರಣೆ ಮಾರ್ಗಸೂಚಿಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗುವುದು.

ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಲ್ಲಿ ಪ್ರವಾಸೋದ್ಯಮಕ್ಕೆ ಅನ್ವಯಿಸಿದ ಯೋಜನೆಗಳಿಗೆ ಸಂಬಂಧಿಸಿದಂತೆ ಇತರೆ ಇಲಾಖೆಗಳಿಂದ ನೀಡಲಾಗುವ ಸೌಲಭ್ಯ ಬೆಂಬಲ ಮತ್ತು ರಿಯಾಯಿತಿಗಳು ಹಾಗೂ ಮಾರ್ಗಸೂಚಿಗಳ ಕುರಿತು ಸಂಬಂಧಿಸಿದ ಇಲಾಖೆಗಳು ಪ್ರತ್ಯೇಕ ಆದೇಶಗಳನ್ನು ಹೊರಡಿಸತಕ್ಕದ್ದು ಎಂಬುದಾಗಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ: 2ರ ನಡವಳಿಯಲ್ಲಿ ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ಕ್ಕೆ ಈ ಕೆಳಕಂಡಂತೆ ಪ್ರಸ್ತಾವಿತ ತಿದ್ದುಪಡಿಗಳನ್ನು ತರಲು ಸಭೆಯಲ್ಲಿ ತೀರ್ಮಾನಿಸಲಾಗಿದೆ.

i). ಕೇಂದ್ರಿಕೃತ ಪ್ರವಾಸೋದ್ಯಮ ತಾಣಗಳ (FTD) ಪಟ್ಟಿ ತಿದ್ದುಪಡಿ.

ii). ಕಲ್ಯಾಣ ಕರ್ನಾಟಕದ ಹೋಟೆಲ್ ಯೋಜನೆ- ಪ್ರಿಮಿಯಂ ಹೋಟೆಲ್ ಗಳಿಗೆ ಬಂಡವಾಳ ಹೂಡಿಕೆಗೆ ಶೇಕಡ 5 ರಷ್ಟು ಹೆಚ್ಚುವರಿ ಸಹಾಯಧನ ಹೆಚ್ಚಳ.

iii). ಕರ್ನಾಟಕ ಪ್ರವಾಸೋದ್ಯಮ ನೀತಿ 2020-26ರ ಕಾಲಾವಧಿಯನ್ನು ಅಂದರೆ ದಿನಾಂಕ: 17.09.2026 ರವರೆಗೆ ವಿಸ್ತರಿಸಲು ಸಚಿವ ಸಂಪುಟದ ಅನುಮೋದನೆ ಪಡೆಯುವುದು.

iv). ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರ ಪ್ರಸ್ತಾವಿತ ಬಜೆಟ್ ಅನ್ನು ರೂ.426.00 ಕೋಟಿಯಿಂದ ರೂ. 1000.00 ಕೋಟಿಗಳಿಗೆ ಪರಿಷ್ಕರಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು.

v). ಸುಸ್ಥಿರ ಕ್ರಮಗಳನ್ನು ಅಳವಡಿಸಿಕೊಂಡಿರುವ ಯೋಜನೆಗಳಿಗೆ ಜಿಲ್ಲಾ ಹಂತದಲ್ಲಿ ಪ್ರೋತ್ಸಾಹಧನ ನೀಡುವುದು.

vi). ಪ್ರವಾಸೋದ್ಯಮ ನೀತಿಯಡಿಯಲ್ಲಿ ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಿನಾಯಿತಿ ನೀಡುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯು ದಿನಾಂಕ:09.03.2021 ರಂದು ಹೊರಡಿಸಿರುವ ಅಧಿಸೂಚನೆಯಂತೆ ನೀತಿಯಲ್ಲಿ ಮುಂದ್ರಾಂಕ ಮತ್ತು ನೋಂದಣಿ ಶುಲ್ಕಗಳಲ್ಲಿ ವಿನಾಯಿತಿಗೆ ಸೂಕ್ತ ತಿದ್ದುಪಡಿಗಳನ್ನು ಮಾಡಲು.

vii). ಬಳ್ಳಾರಿ, ಬೆಳಗಾವಿ, ದಾವಣಗೆರೆ, ಕಲಬುರಗಿ, ಶಿವಮೊಗ್ಗ, ತುಮಕೂರು ಮತ್ತು ವಿಜಯಪುರ ಜಿಲ್ಲಾ ಮಿತಿಯಲ್ಲಿ ಹೋಟೆಲ್ ಯೋಜನೆಗಳಿಗೆ ಬಂಡವಾಳ ಹೂಡಿಕೆ ಸಹಾಯಧನಗಳನ್ನು ಅನುಮತಿಸುವುದು.

..2..

viii). ಪೂರಕ ಮೂಲಸೌಕರ್ಯ ಸಹಾಯಧನವನ್ನು ರಿಯಾಯಿತಿ ಪಟ್ಟಿಯಿಂದ ಕೈಬಿಡುವುದು,

ix). ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿ ಮತ್ತು ಜಿಲ್ಲಾ ಪ್ರವಾಸೋದ್ಯಮ ಸಮಿತಿಗಳ ಸದಸ್ಯತ್ವ ಮತ್ತು ಜವಾಬ್ದಾರಿಗಳ ತಿದ್ದುಪಡಿ.

x). ಖಾಸಗಿ ವಲಯದ ಪ್ರತಿನಿಧಿಗಳನ್ನು ಜಿಲ್ಲಾ ಪ್ರವಾಸೋದ್ಯಮ ಸಮಿತಿ ಮತ್ತು ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯಲ್ಲಿ ಈ ಕೆಳಕಂಡಂತೆ ಸೇರಿಸುವುದು.

ಎ) ಜಿಲ್ಲಾ ಪ್ರವಾಸೋದ್ಯಮ ಸಮಿತಿ – ಕರ್ನಾಟಕ ಟೂರಿಸಂ ಸೊಸೈಟಿ (ಕೆ.ಟಿ.ಎಸ್) ನಾಮ ನಿರ್ದೇಶನ ಮಾಡಿದ 3 ಪ್ರತಿನಿಧಿಗಳು.

ಬಿ) ಅಧಿಕಾರಯುಕ್ತ ಸಮಿತಿ - ಕರ್ನಾಟಕ ಟೂರಿಸಂ ಸೊಸೈಟಿ (ಕೆ.ಟಿ.ಎಸ್)ಯಿಂದ ಒಬ್ಬರು, ಐ.ಎ.ಟಿ.ಒ ಅಥವಾ ಸಮಾನವಾದ ರಾಷ್ಟ್ರಮಟ್ಟದ ಟ್ರಾವೆಲ್ ಮತ್ತು ಟೂರಿಸಂ ಸಂಸ್ಥೆ ಯಿಂದ ತಲಾ 1 ಪ್ರತಿನಿಧಿ, ಎಫ್.ಹೆಚ್.ಆರ್.ಎ.ಐ ಅಥವಾ ಸಮಾನವಾದ ರಾಷ್ಟ್ರಮಟ್ಟದ ಹೋಟೆಲ್ ಮತ್ತು ಹಾಸ್ಪಿಟಾಲಿಟಿ ಸಂಸ್ಥೆ ಯಿಂದ ತಲಾ 1 ಪ್ರತಿನಿಧಿ.

ಮೇಲಿನ ಅಂಶಗಳನ್ನು/ವಿವರಗಳನ್ನು ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ರಲ್ಲಿ ಪರಿಷ್ಕರಿಸಿ ಪ್ರಕಟಿಸಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶ.

<u>ಸರ್ಕಾರದ ಆದೇಶ ಸಂಖ್ಯೆ: ಟಿಓಆರ್ 135 ಟಿಡಿಬಿ 2020,</u>
<u>ಬೆಂಗಳೂರು, ದಿನಾಂಕ: 28-09-2021.</u>

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, **ಸರ್ಕಾರದ ಆದೇಶ ಸಂಖ್ಯೆ: ಟಿಓಆರ್ 135 ಟಿಡಿಬಿ 2020, ದಿನಾಂಕ: 18-09-2020ರಲ್ಲಿ** ಕರ್ನಾಟಕ ಪ್ರವಾಸೋದ್ಯಮ ನೀತಿ 2020-25ನ್ನು ಸದರಿ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಂತೆ ರೂಪಿಸಿ, ಸದರಿ ನೀತಿಯಲ್ಲಿ ಅಳವಡಿಸಲಾಗಿರುವ ಪ್ರೋತ್ಸಾಹಧನ, ರಿಯಾಯಿತಿ ಮತ್ತು ಸಬ್ಸಿಡಿಗಳೊಂದಿಗೆ ಜಾರಿಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದ್ದು, ಸದರಿ ಆದೇಶಕ್ಕೆ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಂತೆ ತಿದ್ದುಪಡಿಯನ್ನು ತರಲು ಸರ್ಕಾರದ ಪರಿಷ್ಕೃತ ಅನುಮೋದನೆ ನೀಡಲಾಗಿದೆ.

**ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: ಆಇ/188/ವೆಚ್ಚ-7/2021, ದಿನಾಂಕ: 23-09-2021**ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Vimala 28/09/2021
(ವಿಮಲಾಕ್ಷಿ.ಬಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಪ್ರವಾಸೋದ್ಯಮ ಇಲಾಖೆ.

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು – ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 200 ಪ್ರತಿಗಳನ್ನು ಒದಗಿಸಲು ಕೋರಿದೆ.

1. ಮಹಾಲೇಖಪಾಲರು (ಲೆಕ್ಕಪತ್ರ/ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಅಧ್ಯಕ್ಷರು, ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ಟಾಸ್ಕ್ ಫೋರ್ಸ್, ಬೆಂಗಳೂರು.
4. ಎಲ್ಲಾ ಪ್ರಾದೇಶಿಕ ಆಯುಕ್ತರು.
5. ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಖನಿಜ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲಾಧಿಕಾರಿಗಳು.
7. ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.

..3..

8. ವ್ಯವಸ್ಥಾಪಕ ನಿರ್ದೇಶಕರು, ಅರಣ್ಯ, ವಸತಿ ಮತ್ತು ವಿಹಾರಧಾಮಗಳ ಸಂಸ್ಥೆ, ಖನಿಜ ಭವನ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
10. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು.
11. ಎಲ್ಲಾ ಜಿಲ್ಲೆಗಳ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಮುಖ್ಯಸ್ಥರು.
12. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ(ಸಚಿವ ಸಂಪುಟ), ವಿಧಾನಸೌಧ.
13. ಮಾನ್ಯ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
14. ಅಧ್ಯಕ್ಷರು, ಕರ್ನಾಟಕ ಟೂರಿಸಂ ಸೊಸೈಟಿ, ಬೆಂಗಳೂರು.
15. ಶಾಖಾರಕ್ಷ ಕಡತ/ ಹೆಚ್ಚುವರಿ ಪ್ರತಿಗಳು.

*****

